ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	204(278)
ವಿಧಾನ ಪರಿಷತ್ ಸದಸ್ಯರ ಹೆಸರು	:	ಶ್ರೀ. ಸುನೀಲ್ ಗೌಡ ಬಸವನಗೌಡ ಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	16-07-2019
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರ
(ಅ)	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಚುನಾಯಿತ ಪ್ರತಿನಿಧಿಗಳಿಗೆ ಗೌರವಧನವನ್ನು ನೇರವಾಗಿ ಅವರ ಖಾತೆಗೆ online ಮುಖಾಂತರ ಜಮಾ ಮಾಡುವ ವ್ಯವಸ್ಥೆ ಏನಾದರೂ ಇದೆಯೇ; ಇಲ್ಲದಿದ್ದಲ್ಲಿ, ಅಂತಹ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಚುನಾಯಿತ ಪ್ರತಿನಿಧಿಗಳಿಗೆ ಗೌರವಧನವನ್ನು ನೇರವಾಗಿ ಅವರ ಖಾತೆಗೆ online ಮುಖಾಂತರ ಜಮಾ ಮಾಡುವ ವ್ಯವಸ್ಥೆ ಸದ್ಯಕ್ಕೆ ಚಾಲ್ತಿಯಲ್ಲಿರುವುದಿಲ್ಲ ಹಾಗೂ ಸರ್ಕಾರದ ಮುಂದೆ ಅಂತಹ ಪ್ರಸ್ತಾವನೆಯು ಇರುವುದಿಲ್ಲ.
(ಆ)	ವಿಜಯಪುರ ಜಿಲ್ಲೆಯಲ್ಲಿ ಸ್ಥಾಪನೆ ಮಾಡಿರುವ ಒಟ್ಟು ಶುದ್ಧ ಕುಡಿಯುವ ನೀರಿನ ಘಟಕಗಳ ಎಷ್ಟು; ಅವುಗಳಲ್ಲಿ ಎಷ್ಟು ಘಟಕಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ಎಷ್ಟು ಘಟಕಗಳು ಕಾರ್ಯನಿರ್ವಹಿಸುತ್ತಿಲ್ಲ;	ವಿಜಯಪುರ ಜಿಲ್ಲೆಯಲ್ಲಿ ಸ್ಥಾಪನೆ ಮಾಡಿರುವ ಒಟ್ಟು ಘಟಕಗಳ ಸಂಖ್ಯೆ: 819, ಇವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಘಟಕಗಳ ಸಂಖ್ಯೆ : 707, ಕಾರ್ಯನಿರ್ವಹಿಸದೇ ಇರುವ ಘಟಕಗಳ ಸಂಖ್ಯೆ : 112.
(ಇ)	ಕಾರ್ಯನಿರ್ವಹಿಸದೆ ಇರುವಂತಹ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ದುರಸ್ಥಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ; ಸದರಿ ಘಟಕಗಳ ದುರಸ್ಥಿ ಮಾಡುವ ಕೆಲಸವನ್ನು ಯಾವ ಸಂಸ್ಥೆಗೆ ನೀಡಲಾಗಿದೆ?	ಏಜೆನ್ಸಿಯವರ ಕಾರ್ಯಾಚರಣೆ ನಿರ್ವಹಣೆಯಲ್ಲಿರುವ ಘಟಕಗಳನ್ನು ಏಜೆನ್ಸಿಯವರಿಂದ ದುರಸ್ತಿಗೊಳಿಸಲಾಗುತ್ತಿದೆ. ಮತ್ತು ಇನ್ನುಳಿದ ಘಟಕಗಳನ್ನು ಇಲಾಖೆ ವತಿಯಿಂದ ದುರಸ್ತಿಗೊಳಿಸಲಾಗುತ್ತಿರುತ್ತದೆ. ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಜಿಲ್ಲೆಯ 5 ತಾಲೂಕುಗಳಲ್ಲಿ ನಿರ್ವಹಣೆಯಲ್ಲಿರದ ಘಟಕಗಳಿಗೆ O & M ಟೆಂಡರ್ ಕರೆಯಲಾಗಿದ್ದು, ಟೆಂಡರ್ ಅಂತಿಮಗೊಳಿಸಿದ ನಂತರ ಏಜೆನ್ಸಿಗಳಿಗೆ/ಸಂಸ್ಥೆಗಳಿಗೆ ವಹಿಸಿಕೊಡಲಾಗುವುದು.

ಸಂಖ್ಯೆ:ಗ್ರಾಅಪ 19 ಜಿಪಸ 2019

(ಕೃಷ್ಣಭೈರೇಗೌಡ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು